**Indian Institute of Science Bangalore 560012**

# ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಹೊರಡಿಸಲಾದ ರೋಲಿಂಗ್ ಜಾಹಿರಾತು

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ)ಯು, ತನ್ನ ವಿವಿಧ ಶೈಕ್ಷಣಿಕ ವಿಭಾಗಗಳು ಮತ್ತು ಕೇಂದ್ರಗಳಲ್ಲಿ ಅತ್ಯುತ್ತಮ ಗುಣಮಟ್ಟದ ಸಂಶೋಧನೆಯ ದಾಖಲೆಯನ್ನು ಹೊಂದಿರುವ, ಬೋಧನೆಯ ಬಗ್ಗೆ ಬಲವಾದ ಬದ್ಧತೆಯನ್ನು ಹೊಂದಿರುವ, ಅಸಾಧಾರಣ ಪ್ರತಿಭಾನ್ವಿತ ಮತ್ತು ಪ್ರೇರಿತ ವ್ಯಕ್ತಿಗಳಿಂದ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸುತ್ತಿದೆ.

ಭಾರತೀಯ ಪ್ರಜೆಗಳಿಂದ ಮತ್ತು ಭಾರತೀಯ ಪ್ರಜೆಗಳಲ್ಲದ ವ್ಯಕ್ತಿಗಳಿಂದ (ಭಾರತದ ಸ್ಥಾನಮಾನ ಹೊಂದಿರುವ ಅಥವಾ ಹೊಂದಿರದ ಸಾಗರೋತ್ತರ ನಾಗರಿಕರು (OCI)) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿಶೇಷವಾಗಿ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಪ್ರೋತ್ಸಾಹಿಸುತ್ತೇವೆ.

ಇದು ಒಂದು ರೋಲಿಂಗ್ ಜಾಹೀರಾತು ಆಗಿದ್ದು, ಅಭ್ಯರ್ಥಿಗಳು ಈ ಜಾಹೀರಾತಿಗೆ ಪ್ರತಿಕ್ರಿಯೆಯಾಗಿ ಯಾವುದೇ ಸಮಯದಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿಗಳನ್ನು ಆನ್‌ಲೈನ್ ಪೋರ್ಟಲ್ https://recruitment.iisc.ac.in/frp/ ಮೂಲಕ ಮಾತ್ರ ಸ್ವೀಕರಿಸಲಾಗುತ್ತದೆ.

## ಮೀಸಲಾತಿ

ಮೀಸಲಾತಿ ನೀತಿಯು ಭಾರತ ಸರ್ಕಾರದ (GoI) ನಿಯಮಗಳ ಪ್ರಕಾರವಿದ್ದು ಯಾವುದೇ ಅರ್ಹತೆ, ಅನುಭವ ಮತ್ತು ಸಾಮರ್ಥ್ಯದ ಮೇಲೆ ರಾಜಿ ಮಾಡಿಕೊಳ್ಳುವುದಿಲ್ಲ. ಅರ್ಜಿ ನಮೂನೆಯೊಂದಿಗೆ ಅಗತ್ಯ ಪ್ರಮಾಣಪತ್ರಗಳನ್ನು ಲಗತ್ತಿಸಬೇಕು.

ಅಧ್ಯಾಪಕರ ಹುದ್ದೆಗಳ ಮೀಸಲಾತಿ ಕುರಿತ GOI ನೀತಿಯು ದೈಹಿಕ ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು ಮತ್ತು ಆರ್ಥಿಕವಾಗಿ ದುರ್ಬಲ ವಿಭಾಗಕ್ಕೆ (EWS) ಸೇರಿದವರನ್ನು ಸಹ ಒಳಗೊಂಡಿರುತ್ತದೆ.

ಕಡಿಮೆ ಪ್ರಾತಿನಿಧ್ಯ ಹೊಂದಿರುವ ವರ್ಗಗಳ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಪ್ರೋತ್ಸಾಹಿಸಲಾಗುತ್ತದೆ.

## ವಿಭಾಗಗಳು

ಅರ್ಜಿ ಪೋರ್ಟಲ್‌ನಲ್ಲಿ, ಅರ್ಜಿದಾರರು ಕೆಳಗೆ ಪಟ್ಟಿ ಮಾಡಲಾದ ಮೂರು ವಿಭಾಗಗಳು/ಕೇಂದ್ರಗಳನ್ನು ಸೂಚಿಸಬಹುದು. ಅರ್ಜಿದಾರರು ತಮ್ಮ ವಿಭಾಗಗಳನ್ನು ಆಯ್ಕೆ ಮಾಡುವ ಮೊದಲು ಪ್ರತ್ಯೇಕ ವಿಭಾಗಗಳ ವೆಬ್ ಪುಟಗಳನ್ನು ನೋಡುವಂತೆ ಕೋರಲಾಗಿದೆ. ಪ್ರತಿ ಅರ್ಜಿದಾರರಿಗೆ "ಪ್ರಕ್ರಿಯೆಯಲ್ಲಿದೆ" ಎಂದು ಒಂದು ಅರ್ಜಿಯನ್ನು ಮಾತ್ರ ಅನುಮತಿಸಲಾಗಿದೆ.

**ಜೈವಿಕ ವಿಜ್ಞಾನ**: ಜೀವರಸಾಯನಶಾಸ್ತ್ರ (BC); ಪರಿಸರ ವಿಜ್ಞಾನ ಕೇಂದ್ರ (CES); ನರವಿಜ್ಞಾನ ಕೇಂದ್ರ (CNS); ಸೂಕ್ಷ್ಮ ಜೀವವಿಜ್ಞಾನ ಮತ್ತು ಕೋಶ ಜೀವಶಾಸ್ತ್ರ (MCB); ಆಣ್ವಿಕ ಜೈವಿಕ ಭೌತಶಾಸ್ತ್ರ ಘಟಕ (MBU); ಜೀವಶಾಸ್ತ್ರ ಅಭಿವೃದ್ಧಿ ಮತ್ತು ತಳಿಶಾಸ್ತ್ರ (DBG).

**ರಾಸಾಯನಿಕ ವಿಜ್ಞಾನಗಳು**: ಅಜೈವಿಕ ಮತ್ತು ಭೌತಿಕ ರಸಾಯನಶಾಸ್ತ್ರ (IPC); ವಸ್ತು ಸಂಶೋಧನಾ ಕೇಂದ್ರ (MRC); ಸಾವಯವ ರಸಾಯನಶಾಸ್ತ್ರ (OC); ಘನ ಸ್ಥಿತಿ ಮತ್ತು ರಚನಾತ್ಮಕ ರಸಾಯನಶಾಸ್ತ್ರ ಘಟಕ (SSCU).

**ಭೌತಿಕ ಮತ್ತು ಗಣಿತ ವಿಜ್ಞಾನಗಳು**: ಹೈ ಎನರ್ಜಿ ಫಿಸಿಕ್ಸ್ ಸೆಂಟರ್ (CHEP); ಇನ್‌ಸ್ಟ್ರುಮೆಂಟೇಶನ್ ಮತ್ತು ಅಪ್ಲೈಡ್ ಫಿಸಿಕ್ಸ್ (IAP); ಗಣಿತ; ಭೌತಶಾಸ್ತ್ರ.

**ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸಸ್ (EECS)**: ಕಂಪ್ಯೂಟರ್ ಸೈನ್ಸ್ ಮತ್ತು ಆಟೋಮೇಷನ್ (CSA); ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ಎಂಜಿನಿಯರಿಂಗ್ (ECE); ಎಲೆಕ್ಟ್ರಿಕಲ್ ಎಂಜಿನಿಯರಿಂಗ್ (EE); ಎಲೆಕ್ಟ್ರಾನಿಕ್ ಸಿಸ್ಟಮ್ಸ್ ಎಂಜಿನಿಯರಿಂಗ್ (ESE).

**ಯಾಂತ್ರಿಕ ವಿಜ್ಞಾನಗಳು:** ಏರೋಸ್ಪೇಸ್ ಎಂಜಿನಿಯರಿಂಗ್; ವಾತಾವರಣ ಮತ್ತು ಸಾಗರ ವಿಜ್ಞಾನ ಕೇಂದ್ರ (CAOS); ಭೂ ವಿಜ್ಞಾನ ಕೇಂದ್ರ; ವಿನ್ಯಾಸ ಮತ್ತು ಉತ್ಪಾದನಾ ಕೇಂದ್ರ (DM); ಸುಸ್ಥಿರ ತಂತ್ರಜ್ಞಾನಗಳ ಕೇಂದ್ರ (CST); ರಾಸಾಯನಿಕ ಎಂಜಿನಿಯರಿಂಗ್; ಸಿವಿಲ್ ಎಂಜಿನಿಯರಿಂಗ್; ಮೆಟೀರಿಯಲ್ಸ್ ಎಂಜಿನಿಯರಿಂಗ್; ಮೆಕ್ಯಾನಿಕಲ್ ಎಂಜಿನಿಯರಿಂಗ್.

**ಅಂತರಶಿಸ್ತೀಯ ವಿಜ್ಞಾನಗಳು**: ಸೆಂಟರ್ ಫಾರ್ ಬಯೋ ಎಂಜಿನಿಯರಿಂಗ್ (BE); ಸೆಂಟರ್ ಫಾರ್ ನ್ಯಾನೋ ಸೈನ್ಸ್ ಅಂಡ್ ಎಂಜಿನಿಯರಿಂಗ್ (CeNSE); ಕಂಪ್ಯೂಟೇಶನಲ್ ಮತ್ತು ಡೇಟಾ ಸೈನ್ಸಸ್ (CDS), ಮ್ಯಾನೇಜ್ಮೆಂಟ್ ಸ್ಟಡೀಸ್ (MS), ರಾಬರ್ಟ್ ಬಾಷ್ ಸೆಂಟರ್ ಫಾರ್ ಸೈಬರ್ ಫಿಸಿಕಲ್ ಸಿಸ್ಟಮ್ಸ್ (RBCCPS).

ಕೆಳಗಿನ ಅಂತರಶಿಸ್ತೀಯ ಕೇಂದ್ರಗಳು ಅಧ್ಯಾಪಕರನ್ನು ನೇರವಾಗಿ ನೇಮಿಸಿಕೊಳ್ಳುವುದಿಲ್ಲ. ಈ ಯಾವುದೇ ಒಂದು ಕೇಂದ್ರಗಳಲ್ಲಿ ಸಂಯೋಜಿತರಾಗಲು ಆಸಕ್ತಿ ಹೊಂದಿರುವ ಅರ್ಜಿದಾರರು ಮೇಲೆ ಪಟ್ಟಿ ಮಾಡಲಾದ ಯಾವುದೇ ವಿಭಾಗಗಳು/ ಕೇಂದ್ರಗಳೊಂದರಲ್ಲಿ ಅಧ್ಯಾಪಕ ಸದಸ್ಯರಾಗಿ ನೇಮಕಗೊಂಡಿರಬೇಕು. ಅರ್ಜಿದಾರರು ಅರ್ಜಿ ಪೋರ್ಟಲ್‌ನಲ್ಲಿ ತಮ್ಮ ಸಂಶೋಧನಾ ಆಸಕ್ತಿಗಳು ಆ ಕೇಂದ್ರಗಳೊಂದಿಗೆ ಉತ್ತಮವಾಗಿ ಹೊಂದಿಕೆಯಾದರೆ ತಮ್ಮ ಮೂರು ಆಯ್ಕೆಗಳ ವಿರುದ್ಧ ಈ ಕೆಳಗಿನ ಒಂದು ಅಥವಾ ಹೆಚ್ಚಿನ ಕೇಂದ್ರಗಳನ್ನು ಪಟ್ಟಿ ಮಾಡಬಹುದು. ಅರ್ಜಿದಾರರು ಆಯ್ಕೆ ಮಾಡುವ ಅಂತರಶಿಸ್ತೀಯ ಕೇಂದ್ರಗಳು ಅರ್ಜಿ ನಮೂನೆಯನ್ನು ಮೌಲ್ಯಮಾಪನ ಮಾಡಲು ಸಹಾಯ ಮಾಡುತ್ತವೆ. ಅರ್ಜಿದಾರರು ಆಯ್ಕೆಯಾದಲ್ಲಿ, ಅವರನ್ನು ಮೇಲೆ ಪಟ್ಟಿ ಮಾಡಲಾದ ಒಂದು ವಿಭಾಗಗಳು/ಕೇಂದ್ರಗಳಲ್ಲಿ (ಅರ್ಜಿದಾರರೊಂದಿಗೆ ಸಮಾಲೋಚಿಸಿ) ಕೋರ್ ಫ್ಯಾಕಲ್ಟಿ ಸದಸ್ಯರಾಗಿ ಮತ್ತು ಅವರ ಆಸಕ್ತಿಯ ಅಂತರಶಿಸ್ತೀಯ ಕೇಂದ್ರದಲ್ಲಿ ಜಂಟಿ ಫ್ಯಾಕಲ್ಟಿ ಸದಸ್ಯರನ್ನಾಗಿ ನಿಯೋಜಿಸಲಾಗುತ್ತದೆ.

**ಅಂತರಶಿಸ್ತೀಯ ಕೇಂದ್ರಗಳು**: ಮೂಲಸೌಕರ್ಯ, ಸುಸ್ಥಿರ ಸಾರಿಗೆ ಮತ್ತು ನಗರ ಯೋಜನೆ ಕೇಂದ್ರ (CiSTUP); ದಿವೇಚಾ ಹವಾಮಾನ ಬದಲಾವಣೆ ಕೇಂದ್ರ (DCCC); ಅಂತರಶಿಸ್ತೀಯ ಇಂಧನ ಸಂಶೋಧನಾ ಕೇಂದ್ರ (ICER); ಅಂತರಶಿಸ್ತೀಯ ಜಲ ಸಂಶೋಧನಾ ಕೇಂದ್ರ (ICWAR).

ವಿವಿಧ ವಿಭಾಗಗಳು ಮತ್ತು ಅಂತರಶಿಸ್ತೀಯ ಕೇಂದ್ರಗಳು, ಅಧ್ಯಾಪಕರ ವಿವರಗಳು, ಶೈಕ್ಷಣಿಕ ಕಾರ್ಯಕ್ರಮಗಳು ಮತ್ತು ಸಂಶೋಧನಾ ಕ್ಷೇತ್ರಗಳ ಕುರಿತಾದ ಹೆಚ್ಚಿನ ವಿವರಗಳು ಆಯಾ ವಿಭಾಗೀಯ ವೆಬ್‌ಸೈಟ್‌ಗಳಲ್ಲಿ ಮತ್ತು (www.iisc.ac.in) ನಲ್ಲಿ ಲಭ್ಯವಿರುತ್ತದೆ.

**ಅಗತ್ಯ ಅರ್ಹತೆ ಮತ್ತು ಅನುಭವ**

ಹಿಂದಿನ ಪದವಿಯಲ್ಲಿ ಪ್ರಥಮ ದರ್ಜೆ ಅಥವಾ ತತ್ಸಮಾನ (ಶ್ರೇಣಿಗಳ ವಿಷಯದಲ್ಲಿ, ಇತ್ಯಾದಿ) ಮತ್ತು ಉದ್ದಕ್ಕೂ ಉತ್ತಮ ಶೈಕ್ಷಣಿಕ ದಾಖಲೆಯೊಂದಿಗೆ ಪಿಎಚ್‌ಡಿ.

ಪಿಎಚ್‌ಡಿ ಮಾಡುವಾಗ ಪಡೆದ ಅನುಭವವನ್ನು ಹೊರತುಪಡಿಸಿ, ಕನಿಷ್ಠ ಮೂರು ವರ್ಷಗಳ ಬೋಧನೆ/ಸಂಶೋಧನೆ/ವೃತ್ತಿಪರ ಅನುಭವ. ವಿಶೇಷ ಪ್ರಕರಣಗಳಲ್ಲಿ ಅಗತ್ಯಕ್ಕಿಂತ ಕಡಿಮೆ ಅನುಭವ ಹೊಂದಿರುವ ಅಭ್ಯರ್ಥಿಗಳನ್ನು ಸಹ ವೇತನದಲ್ಲಿ ಸೂಕ್ತ ಬದಲಾವಣೆಯೊಂದಿಗೆ ಪರಿಗಣಿಸಲಾಗುತ್ತದೆ.

ಅಭ್ಯರ್ಥಿಗಳು 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.

**ವೇತನದ ಪ್ರಮಾಣ:** 12ನೇ ಹಂತದೊಂದಿಗೆ ಮೂಲ ವೇತನ ರೂ. 1,01,500/-. 12ನೇ ಹಂತದಲ್ಲಿ ಮೂರು ವರ್ಷಗಳ ಸೇವೆ ಪೂರ್ಣಗೊಂಡ ನಂತರ, ವೇತನವನ್ನು 13A1 ಹಂತದಲ್ಲಿ ರೂ. 1,31,400/- ಮೂಲ ವೇತನದೊಂದಿಗೆ ನಿಗದಿಪಡಿಸಲಾಗುತ್ತದೆ.

ಒಟ್ಟು ಕನಿಷ್ಠ ವೇತನ (ತುಟ್ಟಿ ಮತ್ತು ಸಾರಿಗೆ ಭತ್ಯೆಗಳು ಸೇರಿದಂತೆ): ಮನೆ ಬಾಡಿಗೆ ಭತ್ಯೆಯೊಂದಿಗೆ ತಿಂಗಳಿಗೆ ರೂ. 1,73,063, ಮತ್ತು ಕ್ಯಾಂಪಸ್‌ನಲ್ಲಿ ವಾಸವಾಗಿದ್ದರೆ ತಿಂಗಳಿಗೆ ರೂ. 1,45,658.

**ಹೊಸ ಅಧ್ಯಾಪಕ ಸದಸ್ಯರಿಗೆ ವಿಶೇಷ ಉಪಕ್ರಮಗಳು**

ಹೊಸ ಅಧ್ಯಾಪಕರ ವೃತ್ತಿಪರ ಮತ್ತು ವೈಯಕ್ತಿಕ ಅಭಿವೃದ್ಧಿಗಾಗಿ ಐಐಎಸ್‌ಸಿಯು ಹಲವಾರು ಆಕರ್ಷಕ ಪ್ರೋತ್ಸಾಹಕ ಯೋಜನೆಗಳನ್ನು ನೀಡುತ್ತದೆ. ಅವುಗಳೆಂದರೆ:

- ಹೊಸ ಅಧ್ಯಾಪಕರು ತಮ್ಮ ಸಂಶೋಧನೆಯನ್ನು ಸಾಧ್ಯವಾದಷ್ಟು ತ್ವರಿತವಾಗಿ ಪ್ರಾರಂಭಿಸಲು, ಅಗತ್ಯವಿರುವ ಸ್ಟಾರ್ಟ್-ಅಪ್ ಸಂಶೋಧನಾ ಅನುದಾನಗಳನ್ನು ಸೇರಿದ ತಕ್ಷಣ ಒದಗಿಸಲಾಗುತ್ತದೆ. ಕಚೇರಿ ಮತ್ತು ಪ್ರಯೋಗಾಲಯಗಳ ಮೂಲ ಪೀಠೋಪಕರಣಗಳು ಮತ್ತು ಅಗತ್ಯ ಕಂಪ್ಯೂಟಿಂಗ್ ಉಪಕರಣಗಳಿಗೆ ಸ್ಟಾರ್ಟ್-ಅಪ್ ಅನುದಾನಗಳನ್ನು ನಿಯಮಿತವಾಗಿ ಒದಗಿಸಲಾಗುತ್ತದೆ. ಹೊಸ ಅಧ್ಯಾಪಕರು ತಮ್ಮ ಸಂಶೋಧನೆಯನ್ನು ಮುಂದುವರಿಸಲು ಅವರಿಗೆ ಅಗತ್ಯವಾದ ಸಲಕರಣೆಗಳಿಗೆ ಒಂದೆರಡು ವರ್ಷಗಳ ಕಾಲ ಗಣನೀಯ ಅನುದಾನವನ್ನು ಸಹ ನೀಡಲಾಗುತ್ತದೆ. ಈ ಸಮಯದಲ್ಲಿ ಅಧ್ಯಾಪಕರು ತಮ್ಮ ಸಂಶೋಧನೆಯನ್ನು ಮುಂದುವರಿಸಲು ವಿವಿಧ ಹಣಕಾಸು ಮೂಲಗಳಿಂದ ಅನುದಾನವನ್ನು ಸಂಗ್ರಹಿಸುತ್ತಾರೆ ಎಂಬ ನಿರೀಕ್ಷೆಯಿರುತ್ತದೆ.

  ಹೊಸ ಅಧ್ಯಾಪಕರು ಅಗತ್ಯವಿದ್ದಲ್ಲಿ ಸಮಿತಿಯ ಮುಂದೆ ಸಲ್ಲಿಸುವ ಪ್ರಸ್ತಾವನೆ ಮತ್ತು ಪ್ರಸ್ತುತಿಯ ಆಧಾರದ ಮೇಲೆ ಸ್ಟಾರ್ಟ್-ಅಪ್ ಅನುದಾನಗಳನ್ನು ಒದಗಿಸಲಾಗುತ್ತದೆ. ಪ್ರಸ್ತಾವನೆಯು ಮೊದಲ ವರ್ಷದಲ್ಲಿ ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಸಮ್ಮೇಳನಗಳಿಗೆ ಹಾಜರಾಗಲು 2 ಲಕ್ಷ ರೂ. ಗಳ ಪ್ರಯಾಣ ಅನುದಾನ ಮತ್ತು ಮೊದಲ ವರ್ಷದಲ್ಲಿ ಸಂಶೋಧನಾ ಸಿಬ್ಬಂದಿಗೆ ಬೆಂಬಲವನ್ನು ನೀಡುವ ವಿನಂತಿಯನ್ನು ಸಹ ಒಳಗೊಂಡಿರಬಹುದು.

- ಮೊದಲ ಮೂರು ವರ್ಷಗಳಲ್ಲಿ ಸ್ಪರ್ಧಾತ್ಮಕ ಆಧಾರದ ಮೇಲೆ ತಿಂಗಳಿಗೆ ರೂ. 25000/- ಟಾಪ್-ಅಪ್ ಸಂಬಳ ಮತ್ತು ರೂ. 3 ಲಕ್ಷ ಸಂಶೋಧನಾ ಅನುದಾನವನ್ನು ನೀಡುವ ಎಂಡೋಡ್ ಯಂಗ್ ಇನ್ವೆಸ್ಟಿಗೇಟರ್ (YI) ಪ್ರಶಸ್ತಿಗಳು ಲಭ್ಯವಿರುತ್ತದೆ. ಇಂತಹ ಪ್ರತಿಯೊಂದು YI ಪ್ರಶಸ್ತಿಯು ಎರಡು ವರ್ಷಗಳವರೆಗೆ ಇರುತ್ತದೆ.

- ಸಂಶೋಧನಾ ಯೋಜನೆಗಳು ಹಾಗೂ ಸಲಹೆಗಾಗಿ ಉದ್ಯಮ ಮತ್ತು ಇತರ ವೃತ್ತಿಪರ ಸಂಸ್ಥೆಗಳೊಂದಿಗೆ ಸಂವಹನ ನಡೆಸಲು ಸುಸ್ಥಾಪಿತ ಕಾರ್ಯವಿಧಾನಗಳು ಲಭ್ಯವಿರುತ್ತದೆ.

ಐಐಎಸ್‌ಸಿಯಲ್ಲಿ, ಕೆಲವು ಕೈಗಾರಿಕಾ ಸಂಶೋಧನಾ ಯೋಜನೆಗಳು ವೈಯಕ್ತಿಕ ಸಂಭಾವನೆಯನ್ನು ಸಹ ಹೊಂದಿರುತ್ತವೆ. ಸಂಸ್ಥೆಯು, ಸ್ಟಾರ್ಟ್-ಅಪ್‌ಗಳಲ್ಲಿ ಬೋಧನಾ ವಿಭಾಗದ ಉದ್ಯಮಶೀಲತೆಗೆ ಹಾಗೂ ನವೋದ್ಯಮಗಳಲ್ಲಿ ಬೋಧನಾ ಸಿಬ್ಬಂದಿಗಳ ಪಾಲ್ಗೊಳ್ಳುವಿಕೆಗೆ ಅನುಕೂಲ ಮಾಡಿಕೊಡುತ್ತದೆ.

- ಅಧ್ಯಾಪಕ ಸದಸ್ಯರಿಗೆ (ಹಾಗು ವಿದ್ಯಾರ್ಥಿಗಳಿಗೆ) ಹಲವಾರು ಸ್ಪರ್ಧಾತ್ಮಕ ಪ್ರಯಾಣ ಅನುದಾನಗಳು ಲಭ್ಯವಿರುತ್ತದೆ. ಈ ಪ್ರಯಾಣ ಅನುದಾನಗಳು ಉನ್ನತ ಶ್ರೇಣಿಯ ಸಮ್ಮೇಳನಗಳಲ್ಲಿ ಪ್ರಬಂಧಗಳನ್ನು ಮಂಡಿಸಲು, ಪ್ರತಿಷ್ಠಿತ ಕಾರ್ಯಾಗಾರಗಳಿಗಾಗಿ ಮತ್ತು ಸಹಯೋಗದ ಸಂಶೋಧನೆಗಳಿಗಾಗಿ ಇರುತ್ತವೆ.

ಮೇಲಿನವುಗಳು ಪ್ರಮಾಣಿತ ಸೌಲಭ್ಯಗಳ ಜೊತೆಗೆ ಇರುತ್ತವೆ, ಅವುಗಳೆಂದರೆ:

- ಪ್ರತಿ 3 ವರ್ಷಗಳ ಬ್ಲಾಕ್ ಅವಧಿಗೆ ₹ 3 ಲಕ್ಷಗಳ ಸಂಚಿತ ವೃತ್ತಿಪರ ಅಭಿವೃದ್ಧಿ ಭತ್ಯೆ (CPDA) (7ನೇ ವೇತನ ಆಯೋಗದ ಮಾನದಂಡಗಳ ಅನುಷ್ಠಾನದ ನಂತರ ಗಣನೀಯವಾಗಿ ಹೆಚ್ಚಾಗುವ ನಿರೀಕ್ಷೆಯಿದೆ).

- ಕ್ಯಾಂಪಸ್‌ನಲ್ಲಿ ವಸತಿ ಸೌಕರ್ಯ.
- ಕನಿಷ್ಠ ಎರಡು ವರ್ಷಗಳ ಅವಧಿಗೆ ಸಂಸ್ಥೆಗೆ ಸೇವೆ ಸಲ್ಲಿಸಬೇಕೆಂಬ ಷರತ್ತಿಗೊಳಪಟ್ಟು, ವಿದೇಶದಿಂದ ಸ್ಥಳಾಂತರಗೊಂಡರೆ ₹ 5,00,000 ಅಥವಾ ಭಾರತದೊಳಗೆ ಸ್ಥಳಾಂತರಗೊಂಡರೆ ₹ 1,25,000 ವರೆಗಿನ ಪ್ರಯಾಣ ಮತ್ತು ಸ್ಥಳಾಂತರ ವೆಚ್ಚಗಳ ಮರುಪಾವತಿ.

## **ಹೆಚ್ಚುವರಿ ಮಾಹಿತಿ**

✓ ನಾವು ಭಾರತೀಯ ನಾಗರಿಕರು ಮತ್ತು ವಿದೇಶಿ ಪ್ರಜೆಗಳಿಂದ ಅರ್ಜಿಗಳನ್ನು ಸ್ವಾಗತಿಸುತ್ತೇವೆ.

- ಭಾರತದ ಸಾಗರೋತ್ತರ ನಾಗರಿಕರಾಗಿರುವ ವಿದೇಶಿ ಪ್ರಜೆಗಳು (OCI) ನಿಯಮಿತ ನೇಮಕಾತಿಗಳಿಗೆ ಅರ್ಜಿ ಸಲ್ಲಿಸಬಹುದು.

- OCI ಸ್ಥಾನಮಾನವನ್ನು ಹೊಂದಿರದ ವಿದೇಶಿ ಪ್ರಜೆಗಳನ್ನು ನವೀಕರಿಸಬಹುದಾದ 5 ವರ್ಷಗಳ ಒಪ್ಪಂದದ ಮೇಲೆ ನೇಮಕಾತಿಗೆ ಪರಿಗಣಿಸಬಹುದು.

✓ ಸೂಕ್ತವೆಂದು ಕಂಡುಬಂದ ಅಭ್ಯರ್ಥಿಗಳನ್ನು ಮಾತ್ರ ಪರಿಶೀಲಿಸುವ ಮತ್ತು ಸಂದರ್ಶನಕ್ಕೆ ಕರೆಯುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೀಗಾಗಿ, ಕನಿಷ್ಠ ಅರ್ಹತಾ ಮಾನದಂಡಗಳನ್ನು ಪೂರೈಸಿದ ಮಾತ್ರಕ್ಕೆ ಸಂದರ್ಶನಕ್ಕೆ ಕರೆಯಲು ಅರ್ಹತೆ ದೊರೆಯುವುದಿಲ್ಲ.

✓ ಸರ್ಕಾರಿ ಅಥವಾ ಅರೆ ಸರ್ಕಾರಿ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಅರ್ಜಿದಾರರು ತಮ್ಮ ಅರ್ಜಿಯನ್ನು ಸರಿಯಾದ ಚಾನೆಲ್ ಮೂಲಕ ಕಳುಹಿಸಬೇಕು ಅಥವಾ ಸಂದರ್ಶನಕ್ಕೆ ಕರೆದರೆ ಸಂದರ್ಶನದ ಸಮಯದಲ್ಲಿ ತಮ್ಮ ಉದ್ಯೋಗದಾತರಿಂದ ನಿರಾಕ್ಷೇಪಣಾ ಪ್ರಮಾಣಪತ್ರವನ್ನು ಹಾಜರುಪಡಿಸಬೇಕು.

✓ ಭಾರತದ ಯಾವುದೇ ಸ್ಥಳದಿಂದ ಸಂದರ್ಶನಕ್ಕೆ ಹಾಜರಾಗಲು ಪ್ರಯಾಣ ವೆಚ್ಚವನ್ನು ಸಂಸ್ಥೆಯ ಮಾನದಂಡಗಳ ಪ್ರಕಾರ ಮರುಪಾವತಿಸಲಾಗುವುದು.

- ✓ ಅರ್ಜಿಯಲ್ಲಿ ಒದಗಿಸಲಾದ ಮಾಹಿತಿಯ ನಿಖರತೆಗೆ ಅಭ್ಯರ್ಥಿಯು ಜವಾಬ್ದಾರನಾಗಿರುತ್ತಾನೆ. ಅರ್ಜಿಯಲ್ಲಿ ನೀಡಲಾದ ಯಾವುದೇ ಮಾಹಿತಿಯು ತಪ್ಪು ಅಥವಾ ಸುಳ್ಳು ಎಂದು ನಂತರದಲ್ಲಿ ಕಂಡುಬಂದರೆ, ಅಭ್ಯರ್ಥಿಯ ಅರ್ಜಿಯನ್ನು ಅಥವಾ ನೇಮಕಾತಿಯನ್ನು ರದ್ದುಗೊಳಿಸಬಹುದು.

- ✓ ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ತಮ್ಮ ಆದ್ಯತೆಯ ವಿಭಾಗಗಳು ಅಥವಾ ಕೇಂದ್ರಗಳ ಅಧ್ಯಕ್ಷರನ್ನು ಸಂಪರ್ಕಿಸಲು ಪ್ರೋತ್ಸಾಹಿಸಲಾಗಿದೆ.

## ಅರ್ಜಿ ಸಲ್ಲಿಸುವ ವಿವರ

ಆನ್‌ಲೈನ್ ಅರ್ಜಿ ನಮೂನೆಯನ್ನು ಭರ್ತಿ ಮಾಡಲು ಅರ್ಜಿದಾರರು https://recruitment.iisc.ac.in/frp/ ಗೆ ಲಾಗಿನ್ ಆಗಬೇಕು. ಪೋರ್ಟಲ್‌ನಲ್ಲಿ ಸೂಚಿಸಿರುವಂತೆ ಅರ್ಜಿ ನಮೂನೆಯೊಂದಿಗೆ ಈ ಕೆಳಗಿನ ದಾಖಲೆಗಳನ್ನು (ಪಿಡಿಎಫ್ ರೂಪದಲ್ಲಿ) ಅಪ್‌ಲೋಡ್ ಮಾಡಬೇಕು.

- ವ್ಯಾಸಂಗ ವಿವರದೊಂದಿಗೆ (CV) ಎಲ್ಲಾ ಪ್ರಕಟಣೆಗಳ ಪಟ್ಟಿ.
- ಅರ್ಜಿದಾರರ 5 ಆಯ್ದ ಪ್ರಕಟಣೆಗಳು.
- ಸಂಶೋಧನಾ ಯೋಜನೆಯ ಸಂಕ್ಷಿಪ್ತ ವಿವರಣೆ. ಸಂಶೋಧನಾ ಯೋಜನೆಯು ಪ್ರಯೋಗಾಲಯಕ್ಕೆ ಅವಶ್ಯಕವಾದ ಸ್ಥಳ, ಮತ್ತು ಉಪಕರಣಗಳ ಜೊತೆಗೆ ಅಂದಾಜು ವೆಚ್ಚವನ್ನು (ಪ್ರಯೋಗಾಲಯದ ಸಿದ್ಧತೆಗೆ ಅವಶ್ಯಕವಾದ ಯಾವುದೇ ವೆಚ್ಚವನ್ನು ಒಳಗೊಂಡಂತೆ) ಒಳಗೊಂಡಿರಬೇಕು.
- ಪದವಿಪೂರ್ವ ಮತ್ತು ಸ್ನಾತಕೋತ್ತರ ಹಂತಗಳಲ್ಲಿ ಬೋಧನೆಗಾಗಿ ಸ್ಪಷ್ಟವಾಗಿ ರೂಪಿಸಲಾದ ಬೋಧನಾ ಯೋಜನೆ.
- GoI ಮಾನದಂಡಗಳ ಪ್ರಕಾರ ಅನ್ವಯಿಸುವ, ಸಕ್ಷಮ ಪ್ರಾಧಿಕಾರದಿಂದ ಇತ್ತೀಚಿನ ಜಾತಿ ಮತ್ತು/ಅಥವಾ ಅಂಗವೈಕಲ್ಯ ಪ್ರಮಾಣಪತ್ರ.
- ಅರ್ಜಿದಾರರು ಒದಗಿಸಲು ಬಯಸಬಹುದಾದ ಯಾವುದೇ ಇನ್ನಿತರ ಸಂಬಂಧಿತ ಮಾಹಿತಿ.

ಈ ಜಾಹೀರಾತಿಗೆ ಸಂಬಂಧಿಸಿದ ಯಾವುದೇ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಇವರನ್ನು ಸಂಪರ್ಕಿಸಿ:
ರಿಜಿಸ್ಟ್ರಾರ್, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು 560012, ಭಾರತ

ಫ್ಯಾಕ್ಸ್: +91-80-23600757 ದೂರವಾಣಿ: +91-80-23600757/22932444

ಇಮೇಲ್: registrar@iisc.ac.in ಜೊತೆಗೆ recruitment.council@iisc.ac.in ಮತ್ತು ar.council@iisc.ac.in ಇವರಿಗೆ ಸಿಸಿ ಮಾಡಿ

ಆನ್‌ಲೈನ್ ಪೋರ್ಟಲ್ ಪ್ರವೇಶಿಸಲು ದಯವಿಟ್ಟು ಈ ಲಿಂಕ್ ಅನ್ನು ಕ್ಲಿಕ್ ಮಾಡಿ: https://recruitment.iisc.ac.in/frp/